**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು,

ನೃಪತುಂಗ ರಸ್ತೆ, ಬೆಂಗಳೂರು-560 001

ಸಂಖ್ಯೆ :ಸಿ1(7)ಸ್ವ.ಚಾ.ಬ:01/14-15 ದಿನಾಂಕ:-23-04-2014

## ಸುತ್ತೋಲೆ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಗ್ರೂಪ್-ಬಿ ಹಾಗೂ ತತ್ಸಮಾನ ವೃಂದದ 1999ನೇ ಸಾಲಿನ ಅಧಿಕಾರಿಗಳಿಗೆ ಸ್ವಯಂಚಾಲಿತ ವೇತನ ಭಡ್ತಿ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸುವ ಬಗ್ಗೆ

ಉಲ್ಲೇಖ: ಸರ್ಕಾರದ ಆದೇಶದ ಸಂಖ್ಯೆ: ಎಫ್‌ಡಿ 25 ಎಸ್‌ಆರ್‌ಪಿ91 ದಿನಾಂಕ:-01-02-1993

&&&&&

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ 1999ನೇ ಸಾಲಿನ ಗ್ರೂಪ್-ಬಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ 2014ರ ಏಪ್ರಿಲ್/ಮೇ ತಿಂಗಳಲ್ಲಿ 15 ವರ್ಷಗಳ ಸೇವೆ ಪೂರ್ಣಗೊಳ್ಳಲಿದ್ದು ಸದರಿ ಅಧಿಕಾರಿಗಳು ಉಲ್ಲೇಖಿತ ಸರ್ಕಾರಿ ಆದೇಶದ ಪ್ರಕಾರ 15ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿಗೆ ಅರ್ಹರಿರುತ್ತಾರೆ.

ಆದ್ದರಿಂದ ಸಂಬಂದಿಸಿದ ಜಿಲ್ಲಾ ಉಪನಿರ್ದೇಶಕರುಗಳು/ಪ್ರಾಂಶುಪಾಲರುಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ (ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಗೆ ಒಳಪಟ್ಟ ಜಿಲ್ಲೆಗಳ) ಮೇಲ್ಕಂಡಂತಹ ಗ್ರೂಪ್-ಬಿ ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ಸ್ವಯಂಚಾಲಿತ ವೇತನ ಭಡ್ತಿಯ ಪ್ರಸ್ತಾವನೆಗಳನ್ನು ಅನುಬಂದಿತ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿಯನ್ನು ಕ್ರೂಢೀಕರಿಸಿ ಒಟ್ಟಾಗಿ ಒಂದೇ ಬಾರಿಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ( ಈ ಸುತ್ತೋಲೆಯೊಂದಿಗೆ ಅನುಬಂಧಿಸಲಾದ ಚೆಕ್‌ಲಿಸ್ಟ್‌ನಲ್ಲಿಯೇ ಮಾಹಿತಿಯನ್ನು ಸಲ್ಲಿಸುವುದು)

Mulouuah 25/4

(ಫಿಲೋಮಿನಾ ಲೋಬೊ)

ಅಪರ ಆಯುಕ್ತರು,(ಆಡಳಿತ)(ಹೆ.ಪ್ರ)

23/4/14

**ಇವರಿಗೆ:**

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ರವರಿಗೆ ಮಾಹಿತಿಗಾಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು.
3. ಎಲ್ಲಾ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರು ಹಾಗೂ ಸಿ.ಟಿ.ಇ.ಗಳಲ್ಲಿನ ಪ್ರಾಂಶುಪಾಲರು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಹಾಗೂ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ. ಹಾಗು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. (ಬೆಂಗಳೂರು ಆಯುಕ್ತಾಲಯ)
6. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ.
7. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸುತ್ತೋಲೆಯನ್ನು ಮುಂದಿನ ಶಿಕ್ಷಣ ವಾರ್ತಾ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.
8. ಕಛೇರಿ ಪ್ರತಿ.

## 15 ವರ್ಷಗಳ ಸ್ವಯಂಚಾಲಿತ ಬಡ್ತಿ ಮಂಜೂರು ಮಾಡುವ ಬಗ್ಗೆ ನಮೂನೆ

| | | |
|---|---|---|
| 1. | ಜೇಷ್ಠತೆ ಕ್ರಮ ಸಂಖ್ಯೆ | |
| 2. | ಕೆ. ಪಿ. ಎಸ್. ಸಿ ಕ್ರಮ ಸಂಖ್ಯೆ: | |
| 3. | ಅಧಿಕಾರಿಯ ಹೆಸರು,/ಪದನಾಮಸೇವೆ/ ಸಲ್ಲಿಸುತ್ತಿರುವ ಕಛೇರಿ ವಿಳಾಸ | |
| 4. | ಗ್ರೂಪ್–ಬಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ (ನೇರ ನೇಮಕಾತಿ/ಬಡ್ತಿ ಮುಖಾಂತರವೆ) | |
| 5. | 15 ವರ್ಷಗಳ ಸ್ವಯಂಚಾಲಿತ ಬಡ್ತಿಗೆ ಅರ್ಹರಾದ ದಿನಾಂಕ | |
| 6. | ಹಾಲಿ ಪಡೆಯುತ್ತಿರುವ ವೇತನ ಮತ್ತು ವೇತನ ಶ್ರೇಣಿ | |
| 7. | ಕಾಲಮಿತಿ ಬಡ್ತಿಯಲ್ಲಿ ನಿಗಧಿ ಪಡಿಸಿದ ವೇತನ ಶ್ರೇಣಿ | |
| 8. | 15 ವರ್ಷಗಳ ಸ್ವಯಂಚಾಲಿತ ಬಡ್ತಿಯಲ್ಲಿ ನಿಗದಿಪಡಿಸಬೇಕಾದ ವೇತನ ಶ್ರೇಣಿ | |
| 9. | ಮುಂಬಡ್ತಿ ಹುದ್ದೆಗೆ ನಿಗಧಿಪಡಿಸಲಾದ ಇಲಾಖಾ ಪರೀಕ್ಷೆಗಳು/ ತೇರ್ಗಡೆ ಬಗ್ಗೆ ವಿವರಗಳು (ದೃಢೀಕೃತ ದಾಖಲೆಗಳೊಂದಿಗೆ) | |
| 10. | ಖಾಯಂಪೂರ್ವ ಸೇವಾ ಅವಧಿ ತೃಪ್ತಿಕರ ಎಂದು ಘೋಷಣೆ ಆಗಿರುವ ಬಗ್ಗೆ ಆದೇಶದ ಪ್ರತಿ ಲಗತ್ತಿಸಲಾಗಿದೆಯೇ | |
| 11. | ಸ್ವಯಂಚಾಲಿತ ಬಡ್ತಿ ನೀಡುವ ಅವಧಿಯಲ್ಲಿ ಶಿಸ್ತು ಕ್ರಮ ಎದುರಿಸುತ್ತಿದ್ದಾರೆಯೇ/ ಅಥವಾ ದಂಡನೆ ವಿಧಿಸಲಾಗಿದೆಯೇ | |
| 12. | 05 ವರ್ಷಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು ತೃಪ್ತಿಕರ ಇರುವ ಬಗ್ಗೆ ಮಾಹಿತಿ ( ಸೂಕ್ತ ಪ್ರಾಧಿಕಾರದ ಷರಾ, ಸಹಿಯೊಂದಿಗೆ) | |
| 13. | ಪ್ರೊಬೇಷನರಿ ಮುಖ್ಯ ಶಿಕ್ಷಕರಾಗುವ ಪೂರ್ವದಲ್ಲಿ ಹಿಂದಿನ ಸೇವೆಯ ಹುದ್ದೆಯಲ್ಲಿ ನಿರಂತರ 10/15 ವರ್ಷಗಳ ಸೇವೆಯನ್ನು ಪೂರೈಸಿ ಕಾಲಮಿತಿ ಬಡ್ತಿ/ ಸ್ವಯಂಚಾಲಿತ ಬಡ್ತಿ ವೇತನ ಮಂಜೂರಾಗಿದ್ದರೆ ಮಾಹಿತಿ | |
| 14. | 15 ವರ್ಷಗಳ ಸ್ವಯಂಚಾಲಿತ ಬಡ್ತಿಗಾಗಿ ಅಭಿಮತ ಪತ್ರ ಸಲ್ಲಿಸಲಾಗಿದೆಯೇ (ಪ್ರತಿ ಲಗತ್ತಿಸುವುದು) | |

" ಮೇಲಿನಂತೆ ನಮೂದಿಸಿ ಸಲ್ಲಿಸಿರುವ ಮಾಹಿತಿಗಳು ನೈಜತೆಯಿಂದ ಕೂಡಿರುತ್ತವೆ ಎಂದು ದೃಢೀಕರಿಸಿದೆ. "

( )

ಅಧಿಕಾರಿಯ ಹೆಸರು / ಸಹಿ

| | | |
|---|---|---|
| 15 | 15 ವರ್ಷಗಳ ಸ್ವಯಂಚಾಲಿತ ಬಡ್ತಿ ಮಂಜೂರು ಮಾಡುವ ಬಗ್ಗೆ ಶಿಫಾರಸು ಮಾಡುವ ಅಧಿಕಾರಿಯ ಸ್ಪಷ್ಟ ಅಭಿಪ್ರಾಯ /ಶಿಫಾರಸ್ಸು | |
| 16 | ಷರಾ | |

ಶಿಫಾರಸು ಮಾಡುವ ಅಧಿಕಾರಿಯ:

ಸಹಿ (ಮೊಹರಿನೊಂದಿಗೆ)